<u>ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳು, ಕುಮಟಾ.</u>

ಸಿಸಿ ನಂ. 34/2023
ಪಿಡಬ್ಲೂ : 2

| | | |
|---|---|---|
| ಹೆಸರು | : | ಶ್ರೀ ವಿನಾಯಕ |
| ತಂದೆಯ ಹೆಸರು | : | ರಾಮ ಸಿರ್ಸಿಕರ |
| ವಯಸ್ಸು | : | 52 ವರ್ಷ |
| ಉದ್ಯೋಗ | : | ಸರ್ವಿಸ್ ಮ್ಯಾನೇಜರ ಎಸ್ ಬಿ ಐ ಕುಮಟಾ |
| ವಾಸ್ತವ್ಯ | : | ಕುಮಟಾ |
| ಸತ್ಯ ಪ್ರತಿಜ್ಞೆಯ ಮೇರೆಗೆ | : | ದಿನಾಂಕ 02-07-2025 ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು. |

**<u>ಮುಖ್ಯ ವಿಚಾರಣೆ : ಪಿರ್ಯಾದುದಾರರ ಪರವಾಗಿ : ಶ್ರೀ ಎನ್ ಎಮ್ ಎನ್ ವಕೀಲರಿಂದ :</u>**

ನಾನು ಜುಲೈ 2023 ರಿಂದ ಎಸ್ ಬಿ ಐ ಕುಮಟಾದಲ್ಲಿ ಸರ್ವಿಸ್ ಮ್ಯಾನೇಜರ್ ಆಗಿ ಕಾರ್ಯ ನಿರ್ವಹಿಸುತ್ತಿದ್ದೇನೆ.

2. ಶ್ರೀಮತಿ ಸುರೇಖಾ ಬಾಬು ಗುನಗಿ ಇವರು ನಮ್ಮ ಬ್ಯಾಂಕಿನಲ್ಲಿ ಖಾತೆಯನ್ನು ಹೊಂದಿದ್ದಾರೆ . ಅವರ ಖಾತೆ ಕ್ಲೋಜ್ ಆಗುವ ಪೂರ್ವದಲ್ಲಿ ಅವರು ನಮ್ಮ ಬ್ಯಾಂಕಿನಲ್ಲಿ ದಿಃ 29-12-2005 ರಿಂದ ನಮ್ಮ ಬ್ಯಾಂಕಿನಲ್ಲಿ ಖಾತೆಯನ್ನು ಹೊಂದಿದ್ದರು . ನಿಪಿ-1 ನಮ್ಮ ಬ್ಯಾಂಕಿನಿಂದ ನೀಡಲಾದ ಚೆಕ್ ಎಂದರೆ ಸರಿ . ಬ್ಯಾಂಕಿಗೆ ಕಲೆಕ್ಷನ್ ಗಾಗಿ ಚೆಕ್ ನ್ನು ಹಾಕಿದಾಗ ನಾವು ಮೊದಲಿಗೆ ಚೆಕ್ ನಲ್ಲಿರುವ ಸಹಿಯನ್ನು ನೋಡುತ್ತೇವೆ . ನಂತರ ಅಕೌಂಟ್ ನಲ್ಲಿ ಹಣವಿದೆಯೋಗ ಇಲ್ಲವೋ ಖಾತೆ ಕ್ಲೋಜ್ ಆಗಿದೆಯಾ ಅಥವಾ ಇದೆಯಾ ನೋಡುತ್ತೇವೆ . ಈ ದಿನ ನ್ಯಾಯಾಲಯಕ್ಕೆ ಸುರೇಖಾ ಬಾಬು ಗುನಗಿ ಇವರ ಸ್ಪೇಷಿಮೆನ್ ಸಿಗ್ನೇಚರ್ ನ್ನು ನಾನು ತೆಗೆದುಕೊಂಡು ಬಂದಿದ್ದೇನೆ . ಸಾಕ್ಷಿ ಸದರಿ ಸ್ಪೇಷಿಮೆನ್ ಸಿಗ್ನೇಚರ್ ನ್ನು ಹಾಜರು ಪಡಿಸಿದ್ದು ನಿಪಿ -6

ಎಂದು ಗುರುತಿಸಲಾಯಿತು . ಚೆಕ್ ನಲ್ಲಿರುವ ಸಹಿ ಹಾಗೂ ನಮ್ಮ ದಾಖಲಾತಿಯಲ್ಲಿರುವ ಸ್ಪೇಷಿಮೆನ್ ಸಿಗ್ನೇಚರ್ ಒಂದೇ ಆಗಿರುವುದಿಲ್ಲ . ನಿಪಿ-6 ಹಸ್ತಾಕ್ಷರ ಕಾರ್ಡನಲ್ಲಿ ನೋಡಿದಾಗ ಅವರು ಸುರೇಖಾ ಬಿ. ಗುನಗಿ ಅಂತಾ ಬರೆದಿದ್ದಾರೆ . ಸಾಮಾನ್ಯವಾಗಿ 2-3 ಸಹಿಗಳನ್ನು ಮಾದರಿ ಸಹಿಯಾಗಿ ಪಡೆದುಕೊಳ್ಳುತ್ತೇವೆ . ಅದರಲ್ಲಿ ಡಿಸಿಬಲ್ ಇರುವ ಸಹಿಯನ್ನು ಸ್ಕ್ಯಾನ್ ಮಾಡಿ ಇಟ್ಟುಕೊಳ್ಳುತ್ತೇವೆ . ನಿಪಿ-6 ರಲ್ಲಿ ಸುರೇಖಾ ಗುನಗಿಯವರ ಹೆಸರಿನ ಹಿಂದೆ ಇರುವುದು ಅವರ ಸಹಿ ಎಂದರೆ ಸಾಕ್ಷಿ ಕೆಲವೊಮ್ಮೆ ಗ್ರಾಹಕರು ಅವರ ಸಹಿಯನ್ನು ಮಾಡಿ ಹೆಸರನ್ನು ಬರೆಯುವ ಸಾಧ್ಯತೆ ಇದೆ ಎಂದು ನುಡಿದಿರುತ್ತಾರೆ . ನಿಪಿ-1 ಚೆಕ್ ನಲ್ಲಿರುವ ಸಹಿ ಹಾಗೂ ಸ್ಪೇಷಿಮೆನ್ ಕಾರ್ಡಿನಲ್ಲಿರುವ ಹೆಸರಿನ ಪೂರ್ವದಲ್ಲಿರುವ ಸಹಿ ಮ್ಯಾಚ್ ಆಗುತ್ತವೆ ಎಂದರೆ ಸರಿಯಲ್ಲ .

(ಈ ಹಂತದಲ್ಲಿ ಫಿರ್ಯಾದಿ ಪರ ವಕೀಲರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಯನ್ನು ಕೋರಿದ್ದು ಅನುಮತಿಸಲಾಯಿತು )

**ಪಾಟೀ ಸವಾಲುಃ ಫಿರ್ಯಾದುದಾರ ಪರ ವಕೀಲರಿಂದಃ ಶ್ರೀ ಎನ್ ಎಮ್ ಎನ್ ವಕೀಲರಿಂದಃ**

3. ನಿಪಿ-6 ಸ್ಪೇಷಿಮೆನ್ ಸಿಗ್ನೇಚರ್ ಹೊರತು ಪಡಿಸಿ ನಮ್ಮ ಬ್ಯಾಂಕಿನಲ್ಲಿ ಸುರೇಖಾ ಗುನಗಿಯವರಿಗೆ ಸಂಬಂಧಪಟ್ಟ ಇತ ಸಹಿಗಳು ದಾಖಲಾತಿಗಳಲ್ಲಿ ಇದೆ ಎಂದರೆ ಸರಿ . ಈ ದಿನ ನ್ಯಾಯಾಲಯಕ್ಕೆ ಬರುವ ಪೂರ್ವದಲ್ಲಿ ಸುರೇಖಾ ಗುನಗಿಯವರು ಎಷ್ಟು ಸ್ಪೇಷಿಮೆನ್ ಸಿಗ್ನೇಚರ್ ಗಳನ್ನು ಹಾಕಿದ್ದರು ನೋಡಿಲ್ಲ . ಸಾಕ್ಷಿ ಮುಂದುವರೆದು ಅವರ ಅಕೌಂಟ್ ದಿಃ 23-03-2017 ರಂದು ಕ್ಲೋಜ್ ಆಗಿದೆ ಎಂದು ನುಡಿದಿರುತ್ತಾರೆ . ಚೆಕ್ ಬುಕ್ ಪಡೆದುಕೊಳ್ಳಲು ಪ್ರತ್ಯೇಕವಾದ ಫಾರ್ಮೆಟ್ ಇರುತ್ತದೆ ಎಂದರೆ ಸರಿ . ಅವುಗಳನ್ನು ತುಂಬಿ ಅವರು ಚೆಕ್ ಬುಕ್ ನ್ನು ಪಡೆದುಕೊಳ್ಳಬೇಕಾಗುತ್ತದೆ ಎಂದರೆ ಸರಿ . ಚೆಕ್ ಬುಕ್ ಪಡೆದುಕೊಳ್ಳುವ ಪೂರ್ವದಲ್ಲಿ ಅವರು ನೀಡಿದ ಫಾರ್ಮ ನಮ್ಮ ಬ್ಯಾಂಕಿನಲ್ಲಿ ಇದೆ ಎಂದರೆ ಸಾಕ್ಷಿ ಕೇವಲ

10 ವರ್ಷಗಳವರೆಗೆ ರೆಕಾರ್ಡ ಇರುತ್ತದೆ ಎಂದು ನುಡಿದಿರುತ್ತಾರೆ . ನಿಪಿ–1 ಚೆಕ್ ನಲ್ಲಿರುವ ಸಹಿ ಹಾಗೂ ನಿಪಿ–6 ಸ್ಪೇಷಿಮೆನ್ ಕಾರ್ಡನಲ್ಲಿರುವ ಸಹಿ ಎರಡು ಒಂದೇ ಎಂದರೆ ಸರಿಯಲ್ಲ . ಸಾಕ್ಷಿ ಸ್ವತಃ ಚೆಕ್ ನ್ನು ಅಕೌಂಟ್ ಕ್ಲೋಜ್ ಆದ ನಂತರ ಕೊಡಲಾಗಿದೆ ಎಂದು ನುಡಿದಿರುತ್ತಾರೆ . ಅವರು ಸಹಿಯನ್ನು ನೋಡಿದರೂ ಕೂಡ ಅವರು ಸುರೇಖಾ ಬಿ ಗುನಗಿ ಎಂದು ಸಹಿ ಹಾಕುತ್ತಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಎಲ್ಲಾ ದಾಖಲಾತಿಗಳಲ್ಲಿರುವ ಸಹಿ ಹಾಗೂ ಚೆಕ್ ನ ಮೇಲಿರುವ ಸಹಿಯನ್ನು ನೋಡಿ ನಾವು ಅಕೌಂಟ್ ಕ್ಲೋಜ್ ಎಂದು ಉತ್ತರ ಕೊಟ್ಟಿದ್ದೇವೆ ಎಂದರೆ ಸಾಕ್ಷಿ ಖಾತೆ ಕ್ಲೋಜ್ ಆದ ನಂತರ ಚೆಕ್ ನ್ನು ಕೊಡಲಾಗಿದೆ ಎಂದು ನುಡಿದಿರುತ್ತಾರೆ . ನಾನು ಆರೋಪಿಯ ಪ್ರಭಾವಕ್ಕೆ ಒಳಗಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ .

**ಪಾಟೀ ಸವಾಲು : ಆರೋಪಿತನ ಪರವಾಗಿ : ಶ್ರೀ ಎಸ್ ಯು ಎ ವಕೀಲರಿಂದ :**

4. ನಮ್ಮ ಬ್ಯಾಂಕಿಗೆ ಚೆಕ್ ಹಾಜರು ಪಡಿಸಿದಾಗ ಪ್ರಥಮವಾಗಿ ನಾವು ಅವರ ಅಕೌಂಟ್ ಅಸ್ತಿತ್ವದಲ್ಲಿ ಇದೆ ನೋಡಿ ನಂತರ ಮುಂದಿನ ಪ್ರಕ್ರಿಯೆಯನ್ನು ಕೈಗೊಳ್ಳುತ್ತೇವೆ ಎಂದರೆ ಸರಿ .

ಮರು ವಿಚಾರಣೆ :ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಧಾನ ಪ್ರ.ದ.ನ್ಯಾದಂ., ಕುಮಟಾ.